ತ:ಪ್ರ ನಮೂನೆ ಸಂಖ್ಯೆ II — (೫)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	೧-೪-೧೯೮೭ ರಿಂದ ೩೧-೧೨-೧೯೮೭ರ ವರೆಗೆ ಫಲಾನುಭವಿಗಳಿಗೆ ಬಿಡುಗಡೆ ಮಾಡಿದ ಹಣ	೧-೪-೧೯೮೭ ರಿಂದ ೩೧-೧೨-೧೯೮೭ರ ವರೆಗೆ ಪ್ರಯೋಜನ ಪಡೆದ ಫಲಾನುಭವಿಗಳು	
			ಹೊಸ	ಹಳೆಯ
೧)	ಬೆಂಗಳೂರು (ನಗರ)	೨೭.೨೦೦	೭೬೩	೪೩೩
೨)	ಬೆಂಗಳೂರು (ಗ್ರಾಮಾಂತರ)	೪೭.೨೧೪	೭೩೩	೧೬೭೫
೩)	ಚಿತ್ರದುರ್ಗ	೭೦.೯೩೦	೧೫೭೩	೧೩೮೦
೪)	ಕೋಲಾರ	೧೧೫.೨೦೪	೫೦೯೮	೨೭೪೬
೫)	ಶಿವಮೊಗ್ಗ	೬೪.೩೪೦	೧೨೨೯	೨೩೯೭
೬)	ತುಮಂಕೂರು	೯೪.೦೪೧	೨೧೨೧	೨೧೬೧
೭)	ಬೆಳಗಾಂ	೮೧.೯೩೦	೨೫೮೭	೨೯೮೪
೮)	ಧಾರವಾಡ	೮೯.೧೯೬	೨೨೧೪	೨೮೮೪
೯)	ಬಿಜಾಪುರ	೭೬.೭೦೩	೩೧೪೩	೧೭೮೦
೧೦)	ಉತ್ತರಕನ್ನಡ	೭೫.೩೨೯	೩೩೦೬	೧೪೭೨
೧೧)	ಬಳ್ಳಾರಿ	೮೫.೨೦೦	೨೨೪೮	೨೪೧೦
೧೨)	ಬೀದರ್	೪೮.೫೧೯	೧೪೮೧	೯೯೮
೧೩)	ಗುಲ್ಬರ್ಗ	೬೮.೨೫೨	೨೦೧೯	೨೦೬೦
೧೪)	ರಾಯಚೂರು	೬೦ ೬೬೫	೧೩೩೫	೨೦೨೭
೧೫)	ಚಿಕ್ಕಮಗಳೂರು	೨೫.೬೫೦	೭೬೧	೮೨೬
೧೬)	ದಕ್ಷಿಣಕನ್ನಡ	೫೮.೪೧೧	೧೧೭೨	೨೧೪೦
೧೭)	ಹಾಸನ	೬೩ ೦೮೧	೯೪೫	೩೭೮೯
೧೮)	ಕೊಡಗು	೨೨.೨೭೩	೫೨೫	೬೫೨
೧೯)	ಮಂಡ್ಯ	೬೫.೭೩೦	೨೩೯೩	೧೪೨೨
೨೦)	ಮೈಸೂರು	೧೦೯.೧೧೭	೫೦೪೪	೧೭೪೯
	ಒಟ್ಟು	೧೩೪೬.೯೮೫	೪೦೬ ೪	೩೬೮೯೫

ನ್ಯೂಸ್ ಪ್ರಿಂಟ್ ಕಾಗದ ವಿತರಣೆ

೫೫೧. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಪ್ರಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮಂತ್ರಿ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ದಿನಪತ್ರಿಕೆಗಳು ಹಾಗೂ ವಾರ ಪತ್ರಿಕೆಗಳು ಪ್ರಕಟವಾಗುತ್ತಿವೆ ?

ಆ) ಇವುಗಳಲ್ಲಿ ಬೆಂಗಳೂರಿನಿಂದ ಹುಬ್ಬಳ್ಳಿ, ಧಾರವಾಡ ಬೆಳಗಾವಿ, ವಿಜಾಪುರ, ಗುಲ್ಬರ್ಗಾ, ಮಂಗಳೂರು ಮೈಸೂರು, ತುಮಕೂರಿ, ದಾವಣಗೆರೆ, ಶಿವಮೊಗ್ಗಗಳಲ್ಲಿ ಯಾವ ದಿನ ಪತ್ರಿಕೆಗಳು, ವಾರ ಪತ್ರಿಕೆಗಳು ಕೇಂದ್ರ ಸರ್ಕಾರದ ನ್ಯೂಸ್ ಪ್ರಿಂಟ್ ಕಾಗದವನ್ನು ಪಡೆಯುತ್ತಿವೆ ?

(ವಿವರಗಳನ್ನೊದಗಿಸುವುದು)

ಇ) ಈ ಪತ್ರಿಕೆಗಳ ಪ್ರಸಾರ ಸಂಖ್ಯೆಯೆಷ್ಟು ?

ಈ) ಈ 'ನ್ಯೂಸ್ ಪ್ರಿಂಟ್' ಕಾಗದ ನೀಡುವಿಕೆಯಲ್ಲಿ ಹಾಗೂ ಅನಗತ್ಯ ವಿಳಂಬ ಮಾಡಲಾಗುತ್ತಿದೆ ಎಂದು ದೂರುಗಳು ಸರ್ಕಾರಕ್ಕೆ ಬಂದಿವೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ದಿನ ಪತ್ರಿಕೆಗಳು —೧೪೩

ವಾರ ಪತ್ರಿಕೆಗಳು —೪೧೬

ಒಟ್ಟು ೫೫೯

ಆ) ವೃತ್ತ ಪತ್ರಿಕೆಗಳಿಗೆ 'ನ್ಯೂಸ್ ಪ್ರಿಂಟ್' ಕಾಗದವನ್ನು ಒದಗಿಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಮಾಹಿತಿ ಲಭ್ಯವಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಈ ಬಗ್ಗೆ ಈ ಇಲಾಖೆಗೆ ಯಾವುದೇ ನಿರ್ದಿಷ್ಟ ದೂರುಗಳು ಬಂದಿಲ್ಲ. ಆದರೆ, ರಾಜ್ಯ ಸರ್ಕಾರ ನೇಮಿಸಿದ್ದ ಶ್ರೀ ಎಂ. ಬಿ. ಸಿಂಗ್ ಸಮಿತಿಯು ಮಂದ್ರಣ ಕಾಗದ ಪಡೆಯುವಲ್ಲಿ ಸಣ್ಣ ಪತ್ರಿಕೆಗಳು ಎದುರಿಸುತ್ತಿರುವ ತೊಂದರೆ ನಿವಾರಣೆಗೆ ಕೆಲವು ಶಿಫಾರಸು ಮಾಡಿದೆ. ಈ ಶಿಫಾರಸುಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಣೆಬೆನ್ನೂರ್ ನಗರಕ್ಕೆ ಕುಡಿಯುವ ನೀರು ಯೋಜನೆ

೯೭೬. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).— ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೆಬೆನ್ನೂರ್ ನಗರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯು ಯಾವ ಹಂತದಲ್ಲಿದೆ ?

ಆ) ಇದರ ಯೋಜನಾ ವೆಚ್ಚವೆಷ್ಟು ಹಾಗೂ ಯೋಜನೆಯನ್ನು ಇನ್ನೂ ಕಾರ್ಯಗತಗೊಳಿಸದೇ ಇರುವುದಕ್ಕೆ ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಯೋಜನೆಯ ಅಂದಾಜು ವೆಚ್ಚ ನಕ್ಷೆಗಳನ್ನು ಕರ್ನಾಟಕ ನಗರ ನೀರು ಸಕಬರಾಜು ಮಂಡಳಿಯು ತಯಾರಿಸಿದೆ.

ಆ) ೧೯೮೫-೮೬ರ ದರಗಳ ಮೇರೆಗೆ ಅಂದಾಜು ವೆಚ್ಚ ೪೦೬.೩೧ ಲಕ್ಷ ರೂ.ಗಳು ಆಗುತ್ತದೆ. ಯೋಜನೆಯ ಅಂದಾಜು ಪಟ್ಟಿ ಇನ್ನೂ ಸರ್ಕಾರಕ್ಕೆ ಬಂದಿರುವುದಿಲ್ಲ.